# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : | 612 |
| ಸದಸ್ಯರ ಹೆಸರು | : | **ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| ಉತ್ತರಿಸುವ ಸಚಿವರು | : | ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು. |
| ಉತ್ತರಿಸುವ ದಿನಾಂಕ | : | 23.12.2022. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2021-22ನೇ ಸಾಲಿನ ಅಯವ್ಯಯ ಭಾಷಣದ 59ನೇ ಕಂಡಿಕೆಯನ್ವಯ ಅಡಿಕೆ ಬೆಳೆಗಾರರನ್ನು ತೀವ್ರವಾಗಿ ಬಾಧಿಸುತ್ತಿರುವ ಎಲೆ ಚುಕ್ಕಿ ರೋಗ ಮತ್ತು ಹಳದಿ ಎಲೆ ರೋಗದ ಕುರಿತ ಸಂಶೋಧನೆ ತೀವ್ರಗೊಳಿಸಲು ಹಾಗೂ ಪರ್ಯಾಯ ಬೆಳೆಯನ್ನು ಪ್ರೋತ್ಸಾಹಿಸಲು ರೂಪಾಯಿ 25 ಕೋಟಿಗಳ ಕಾರ್ಯಕ್ರಮವನ್ನು ಘೋಷಿಸಲಾಗಿದ್ದು ಸದರಿ ಕಾರ್ಯಕ್ರಮವು ಯಾವ ಹಂತದಲ್ಲಿದೆ; ಇದು ಕೇವಲ ಘೋಷಣೆಯಾಗಿಯೇ ಉಳಿದಿದೆಯೇ ಅಥವಾ ಕಾರ್ಯರೂಪಕ್ಕೆ ಬಂದಿದೆಯೇ; (ಸಂಪೂರ್ಣವಾದ ಮಾಹಿತಿ ನೀಡುವುದು) | ಅಡಿಕೆ ಬೆಳೆಗಾರರನ್ನು ತೀವ್ರವಾಗಿ ಬಾಧಿಸುತ್ತಿರುವ ಎಲೆ ಚುಕ್ಕೆ ರೋಗ ಹಾಗೂ ಹಳದಿ ಎಲೆ ರೋಗದ ನಿಯಂತ್ರಣೆ ಕಾರ್ಯಕ್ರಮವು ಅನುಷ್ಠಾನ ಹಂತದಲ್ಲಿರುತ್ತದೆ. ಈ ಕುರಿತಂತೆ ಕೈಗೊಳ್ಳಲಾದ ಕ್ರಮಗಳು ಈ ಕೆಳಗಿನಂತಿವೆ.<br>I. <u>ಅಡಿಕೆ ಎಲೆ ಚುಕ್ಕೆ ರೋಗ</u><br>1 ರೋಗದ ನಿಯಂತ್ರಣದ ಕುರಿತಾಗಿ ರೈತರಲ್ಲಿ ಅರಿವು ಮೂಡಿಸಲು ತರಬೇತಿ / ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>2. ರೈತರಿಗೆ ರೋಗ ನಿಯಂತ್ರಣ ಕೈಗೊಳ್ಳಲು ಪ್ರತಿ ಹೆಕ್ಟೇರ್‌ಗೆ ರೂ.4000 ರಂತೆ ಮೊದಲನೆ ಸಿಂಪರಣೆಗೆ ಸಸ್ಯ ಸಂರಕ್ಷಣಾ ಔಷಧಿಗಳನ್ನು ಉಚಿತವಾಗಿ ವಿತರಿಸಲಾಗಿರುತ್ತದೆ. |
| ಆ) | ಮಲೆನಾಡು ಭಾಗದಲ್ಲಿ ಎಲೆ ಚುಕ್ಕಿ ರೋಗಕ್ಕೆ ಔಷಧವಿಲ್ಲ ಎಂದು ಅಧ್ಯಯನದಿಂದ ರುಜುವಾತಾಗಿದ್ದು ಸದರಿ ಭಾಗದ ರೈತರಿಗೆ ಪರಿಹಾರ ನೀಡಲು ಸರ್ಕಾರ ಆಲೋಚನೆ ನಡೆಸಿದೆಯೇ: ನಡೆಸಿದ್ದಲ್ಲಿ ಪ್ರಸ್ತಾವನೆ ಯಾವ ಹಂತದಲ್ಲಿದೆ: ಇಲ್ಲದಿದ್ದಲ್ಲಿ ಪರಿಹಾರ ನೀಡಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳುವುದು? (ಸಂಪೂರ್ಣವಾದ ಮಾಹಿತಿ ನೀಡುವುದು) | 3. ಪರಿಹಾಕ್ಕಾಗಿ ಸಂಶೋಧನೆಗೆ ಒತ್ತು ನೀಡಲು ಮತ್ತು ರೋಗ ನಿಯಂತ್ರಣ ಹಾಗೂ ನಿರ್ವಹಣೆ ಕ್ರಮಗಳಿಗೆ ಕಾರ್ಯಕ್ರಮ ರೂಪಿಸಲಾಗುತ್ತಿದೆ.<br>II. <u>ಅಡಿಕೆ ಹಳದಿ ಎಲೆ ರೋಗ</u><br>1. ವೈಜ್ಞಾನಿಕ ಬೇಸಾಯ ಪದ್ಧತಿಗಳು / ಹೊಸ ತಂತ್ರಜ್ಞಾನ ತಾಂತ್ರಿಕ ಮಾಹಿತಿ ಮುಖಾಂತರ ರೋಗದ ನಿಯಂತ್ರಣದ ಕುರಿತಾಗಿ ರೈತರಲ್ಲಿ ಅರಿವು ಮೂಡಿಸಲು ತರಬೇತಿ / ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>2. ಅಡಿಕೆ ಹಳದಿ ಎಲೆ ರೋಗ ಬಾಧಿತ ಪ್ರದೇಶಗಳಲ್ಲಿ ಅಡಿಕೆ ಬೆಳೆಯ ಬದಲಾಗಿ ಇತರೆ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸಲಾಗುತ್ತಿದೆ.<br>3. ಅಡಿಕೆ ಬೆಳೆಗಾರರು ಇತರೆ ಬೆಳೆಗಳಾದ ಬಾಳೆ, ತೆಂಗು, ಕಾಫಿ, ಕೋಕೋ, ಕಾಳುಮೆಣಸು, ಜಾಯಿ ಕಾಯಿ, ಅಡಿಕೆ ಬೆಳೆಗಾರರಿಗೆ 4 ಹೆ. ವರೆಗೆ ಮಿತಿಗೊಳಿಸಿ ಸಹಾಯಧನವನ್ನುನೀಡಲಾಗುತ್ತಿದೆ.<br>4. ಅಡಿಕೆ ಹಳದಿ ಎಲೆ ರೋಗದ ನಿಯಂತ್ರಣಕ್ಕೆ ಪರ್ಯಾಯ ಬೆಳೆಗಳನ್ನು ಗುರುತಿಸಿ ಹೆಕ್ಟರ್ ಒಂದಕ್ಕೆ ರೂ 15000 ಗಳ ಸಹಾಯಧನ ನೀಡಲಾಗುತ್ತಿದೆ.<br>5. University of Agricultural and Horticultural Sciences, ಶಿವಮೊಗ್ಗ ಮತ್ತು CPCRI ಕಾಸರಗೋಡು ಸಂಸ್ಥೆಗಳ ಮೂಲಕ ಸಂಶೋಧನೆ ಕೈಗೊಳ್ಳಲಾಗುತ್ತಿದೆ.<br>2021-22 ನೇ ಸಾಲಿನಲ್ಲಿ ಆಯವ್ಯಯ ಕೊರತೆಯಿಂದಾಗಿ ಅನುದಾನ ಬಿಡುಗಡೆಯಾಗಿರುವುದಿಲ್ಲ.<br>ಈ ಉದ್ದೇಶಕ್ಕಾಗಿ ರೂ. 11.15 ಕೋಟಿಗಳನ್ನು 2022-23 ನೇ ಸಾಲಿನಲ್ಲಿ ನಿಗದಿಪಡಿಸಲಾಗಿದೆ. ಇದರಲ್ಲಿ ರೂ. 4.98 ಕೋಟಿಗಳು ಈವರೆಗೆ ವಿನಿಯೋಗವಾಗಿದ್ದು ಕಾರ್ಯಕ್ರಮವು ಅನುಷ್ಠಾನ ಹಂತದಲ್ಲಿದೆ.<br>ಮಲೆನಾಡು ಭಾಗದಲ್ಲಿ ಎಲೆ ಚುಕ್ಕೆ ರೋಗಕ್ಕೆ ಔಷಧಿವಿಲ್ಲವೆಂದು ಅಧ್ಯಯನದಿಂದ ರುಜುವಾತಾಗಿರುವುದಿಲ್ಲ. |

No. HORTI/592/HGM/2022

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು